ಶ್ರೀ ಕೆ. ಎಚ್. ಶ್ರೀನಿವಾಸ್.—ಅರ್ಹರಾಗಿರತಕ್ಕಂಥವರಿಗೆ ಬಿಟ್ಟು ಹೋಗಿದೆ ಎನ್ನತಕ್ಕ ದೂರು ಗಳೇನೋ ಇದ್ದೇ ಇದೆ. ಆದರೆ ಅರ್ಹರಾಗಿರತಕ್ಕಂಥವರ ಸಂಖ್ಯೆ ಜಾಸ್ತಿ ಇದೆ. ಆದುದರಿಂದ ಪ್ರತಿ ವರ್ಷ ಎಷ್ಟೆಷ್ಟು ಜನರಿಗೆ ಎಷ್ಟೆಷ್ಟು ಕೊಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಿ ಕೊಡುತ್ತಿದ್ದೇವೆ. ಇನ್ನು ಅನರ್ಹರಾಗಿರತಕ್ಕಂಥವರಿಗೆ ಕೊಟ್ಟಿದ್ದೇವೆಂದು ತಾವೇನೂ ಹೇಳುತ್ತಿದ್ದೀರಿ ಅಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ ಅಂಥಾಮ್ಮ ಯಾವುದಾದರೂ ಇದ್ದಲ್ಲಿ ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಯಾವ ರೀತಿಯಲ್ಲಿ ವ್ಯವಹರಿಸಬೇಕು ಎಂಬುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಜೇವರಾಜ್ ಆಳ್ವ.—ಈ ಪೆನ್‌ಷನ್‌ಗಾಗಿ ೩-೪ ಸಾವಿರ ಅರ್ಜಿಗಳನ್ನು ಹಾಕಿದ್ದಾರೆಂದು ತಿಳಿದು ಬಂದಿದೆ ಅವುಗಳನ್ನು ಇತ್ಯರ್ಥ ಮಾಡಲು ಪರಿಶೀಲನೆ ಮಾಡಲು ಏನಾದರೂ ಒಂದು ಸ್ಕ್ರೂನಿಂಗ್ ಕಮಿಟಿ ಅಂತ ಮಾಡಿದ್ದೀರಾ ? ಹಾಗೆ ಮಾಡಿದ್ದರೆ ಅದರ ಸದಸ್ಯರುಗಳು ಯಾರು ಯಾರು ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಪೆನ್‌ಷನ್ ಕೇಸ್‌ಗಳನ್ನೆಲ್ಲಾ ನಮ್ಮ ರಾಜ್ಯದಲ್ಲಿ ಇರುವ ವಿವಿಧ ಅಸೋಸಿಯೇಷನ್‌ಗಳು ಅವರ ಶಿಫಾರಸ್ಸಿನ ಮೇಲೆ ಇದನ್ನು ಇತ್ಯರ್ಥ ಮಾಡುತ್ತವೆ, ಅವರು ಸ್ಕ್ರೂಟಿನಿ ಮಾಡಿ ಶಿಫಾರಸ್ಸು ಮಾಡಿ ಕಳುಹಿಸುತ್ತಾರೆ.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಈ ಸಾಲಿನಲ್ಲಿ ವಿಶ್ರಾಂತಿ ವೇತನವನ್ನು ಮತ್ತು ಗೌರವ ಧನವನ್ನೇನು ಸ್ಯಾಂಕ್ಷನ್ ಮಾಡಿದ್ದೀರಿ ಅದರಲ್ಲಿ ಎಷ್ಟು ಜನ ಹರಿಜನ ಗಿರಿಜನರಿಗೆ ಕೊಟ್ಟಿದ್ದೀರಿ ಎಂಬು ದನ್ನು ತಿಳಿಸುವುದಕ್ಕೆ ಆಗುತ್ತದೆಯೇ ? ಕೊಟ್ಟಿದ್ದರೆ ಅವರ ಹೆಸರುಗಳನ್ನು ತಿಳಿಸುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ನಮ್ಮ ಮುಂದಿರುವ ಪ್ರಶ್ನೆ ವಿಶ್ರಾಂತಿ ವೇತನದ್ದು. ಎಷ್ಟು ಜನ ಹರಿಜನ ಗಿರಿಜನರಿಗೆ ಕೊಟ್ಟಿದ್ದೇವೆ ಎನ್ನುವ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ, ತಾವು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಒದಗಿಸಿ ಕೊಡುತ್ತೇನೆ. ಸುಮಾರು ೧೪-೧೫ ಜನ ಹರಿಜನ ಕೋಮಿ ನವರಿಗೆ ಸೇರಿದ ವ್ಯಕ್ತಿಗಳಲ್ಲಿ ಕೆಲವರಿಗೆ ೫೦೦, ರೂಪಾಯಿಗಳು ಮಂತ್ಕೆ ಕೆಲವರಿಗೆ ೨೫೦ ರೂ.ಗಳ ಗೌರವಧನ ಈ ರೀತಿ ಕೊಡಲಾಗಿದೆ.

ಶ್ರೀ ಬಿಟ್ಟಸ್ವಾಮಿ ಗೌಡ.—ಸ್ಕ್ರೂನಿಂಗ್ ಕಮಿಟಿ ಈಗಾಗಲೇ ೩೦೦, ೬೦೦ ಕಲಾವಿಧರಿಗೆ ಶಿಫಾರಸ್ಸು ಮಾಡಿ ಈಗಾಗಲೇ ಹೆಸರುಗಳನ್ನು ಕಳುಹಿಸಿದ್ದಾರೆಂದು ತಿಳಿದುಕೊಂಡಿದ್ದೇವೆ ಅವರಿಗೆಲ್ಲಾ ಯಾವಾಗ ಮಂಜೂರು ಮಾಡುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಆ ಶಿಫಾರಸ್ಸುಗಳೆಲ್ಲಾ ಆರ್ಥಿಕ ಇಲಾಖೆಯ ಮುಂದೆ ಇದೆ ಅಲ್ಲಿ ಮನ್ನಣೆ ದೊರೆತ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ತಾವು ಈಗಾಗಲೇ ಪೆನ್‌ಷನ್ ಬಗ್ಗೆ ಕೆಲವು ವಿವರಗಳನ್ನು ಕೊಟ್ಟಿದ್ದೀರಿ. ಆದರೆ ಕೆಲವರು ಈ ಗೌರವ ಧನಕ್ಕಾಗಲೀ ಇಲ್ಲ ಪೆನ್‌ಷನ್‌ಗಾಗಲೀ ಅರ್ಜಿಗಳನ್ನೇ ಹಾಕುವುದಿಲ್ಲ, ಅಂಥವರನ್ನು ಹುಡುಕಿ, ಪತ್ತೆಹಚ್ಚಿ ಕೊಡುತ್ತೀರಾ ? ಮತ್ತೆ ಈಗ ಏನು ತಪ್ಪು ಮುಂದೆ ಸಲವಾರು ಅರ್ಜಿಗಳು ಇದ್ದಾವೆ ಅದರ ಬಗ್ಗೆ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಪೆನ್‌ಷನ್‌ಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಅರ್ಜಿ ಹಾಕದೇ ಇರುವವರಿಗೆ ಹುಡುಕಿ ಕೊಡುವುದಿಲ್ಲ ಆದರೆ ಗೌರವಧನವನ್ನು ನಮಗೆ ಗೊತ್ತಿದೆ ಕೆಲವರು ಅರ್ಹರಾಗಿದ್ದರೂ ಅಂಥವರು ಅರ್ಜಿ ಹಾಕಿರುವುದಿಲ್ಲ, ಅಂಥವರಿಗೆ ನಾವೇ ಗೌರವಧನ ಕೊಟ್ಟಿರುವುದು ಉಂಟು. ಅಂಥವರಿಗೆ ಕೊಡಬೇಕಾಗಿ ಬರುತ್ತದೆ. ಈ ಪೆನ್‌ಷನ್ ವಿಚಾರದಲ್ಲಿ ನಾನು ಆಗಲೇ ಹೇಳಿದ ಹಾಗೆ ಅದು ಅರ್ಥ ಸಚಿವರ ಶಾಖೆ ಮುಂದಿದೆ, ಅವರಿಂದ ಒಪ್ಪಿಗೆ ದೊರೆತ ನಂತರ ಕಾರ್ಯಕ್ರಮ ಕೈಗೊಳ್ಳುತ್ತೇವೆ.

Promotion to Class II Officers in Education Department

529 SMT. RENUKA RAJENDRAN (Chikkaballapur).—

Will the Minister for Education be pleased state :—

whether in the Education Department promotions have been given (a) to Class II Officers, and if so, among them, how many persons have been promoted ;

(*b*) whether it has come to the notice of the Government that the required percentage of reservation of posts has not been kept up in the said promotions in Education Department ;

(*c*) if so, whether the Governmen proposes so take any steps to rectify this mistake done to the SC/STs people in this Department ?

SRI B. SUBBAYYA SHETTY (Minister for Education).—

(*a*) No promotions have been given recently to 70 Class II Officers in the Department of Public Instruction. 70 Graduate Assistants (Class III) were posted to hold independent charge of Class II post, subject to fulfilling the conditions specified in the Memo.

No Scheduled Caste/Scheduled Tribes were posted to hold independent charge of the post of Class II in that batch.

(*b*) Yes.

(*c*) Rectified subsequently by posting qualified Schedule Caste candidates on independent charge of Class II posts.

ಶ್ರೀಮತಿ ರೇಣುಕಾ ರಾಜೇಂದ್ರನ್. ಸ್ವಾಮಿ, ತಾವು ಉತ್ತರದಲ್ಲಿ ೭೦ ಜನಕ್ಕೆ ಪ್ರಮೋಟ್ ಮಾಡಿದ್ದೇವೆಂದು ಹೇಳಿದ್ದೀರಿ ಅದರಲ್ಲಿ ಎಷ್ಟು ಜನ ಎಸ್. ಸಿ. ಯವರು ಇದ್ದಾರೆ ?

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮೂರನೇಯ ದರ್ಜೆಯಿಂದ ಎರಡನೆಯ ದರ್ಜೆಗೆ ೭೦ ಜನಕ್ಕೆ ಸ್ವತಂತ್ರ ಅಧಿಕಾರ ನೀಡಲಾಗಿದೆಂದು ತಿಳಿಸಲಾಗಿದೆ ಮತ್ತು ತಮ್ಮ (ಆ) ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ ಶೇಕಡಾವಾರು ಕಾಯ್ದಿರಿಸಿದ ಹುದ್ದೆಗಳನ್ನು ನೀಡಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್.—೧೯೭೮ನೇ ಇಸ್ವಿಯಲ್ಲಿ ಮೇ ಅಥವಾ ಏಪ್ರಿಲ್ ತಿಂಗಳಿನಲ್ಲಿ ಒಂದು ಗೌವರ್ನಮೆಂಟ್ ಆರ್ಡರ್ ಆಗಿದೆ ಅದರಲ್ಲಿ ಸ್ಪೆಸಿಫಿಕ್ ಆಗಿದೆ. ಆ ಕಾಪಿ ಹುಡುಕಿದೆ ಇವತ್ತು ಸಿಗಲಿಲ್ಲ. ೧ೆ ಪರ್ಸೆಂಟ್ ಮೆಂಟೀನ್ ಮಾಡಿದ್ದಾರೆಯೇ ಅಂತ ಕೇಳಿದ್ದಕ್ಕೆ ತಾವು ಇಲ್ಲವೆಂದು ಹೇಳಿದ್ದೀರಿ ಅದನ್ನು ರೆಕ್ಟಿಫೈ ಮಾಡಿಸುತ್ತೀರಾ ? ಆವಾಗ ಎಲಿಜಿಬಲ್ ಆದ ಕ್ಯಾಂಡಿಡೇಟ್ಸ್ ಇಲ್ಲದೇ ಇರಬಹುದು ಈಗ ಇದ್ದರೆ ಅದನ್ನು ರೆಕ್ಟಿಫೈ ಮಾಡಿಸುತ್ತೀರಾ ಅಂತ ನಾನು ಕೇಳುತ್ತಿರುವುದು ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಸ್ವಾಮಿ, ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಸ್ಟ್ರಕ್ಷನ್‌ರವರು ೭೦ ಜನರು ಇಂಡಿಪೆಂಡೆಂಟ್ ಚಾರ್ಜ್‌ಗೆ ಹಾಕುವಾಗ ಎಸ್.ಸಿ. ಎಸ್.ಟಿ. ಯವರ ಪೈಕಿ ಯಾರೂ ಡಿಪಾರ್ಟ್‌ಮೆಂಟಲ್ ಎಕ್ಸಾಮಿನೇಷನ್ ಪಾಸ್ ಆಗಿರಲಿಲ್ಲವೆಂದು ತಿಳಿಸಿ ಬೇರೆಯವರನ್ನು ಹಾಕಿದ್ದರು, ಆನಂತರ ಇಬ್ಬರನ್ನು ಇಂಡಿಪೆಂಡೆಂಟ್ ಚಾರ್ಜಿಸ್‌ನಲ್ಲಿ ಹಾಕಿದ್ದೇವೆಂದು ತಿಳಿಸಿದ್ದಾರೆ. ಆನಂತರ ನಾನು ಇನ್ನು ಹೆಚ್ಚಿನ ಮಾಹಿತಿಗಳನ್ನು ತರಿಸಿ ನೋಡಿದಾಗ ಇನ್ನು ೬ ಜನ ಡಿಪಾರ್ಟ್‌ಮೆಂಟಿಲ್ ಎಕ್ಸಾಮಿನೇಷನ್ ಪಾಸ್ ಆದವರು ಇದ್ದರು ಎಂದು ತಿಳಿದು ಬಂತು, ಆಗ ಅವರನ್ನು ಕೂಡ ಇಂಡಿಪೆಂಡೆಂಟ್ ಚಾರ್ಜ್‌ನಲ್ಲಿ ಹಾಕಬೇಕು ಅಂತ ಆದೇಶವನ್ನು ಕೊಟ್ಟಿದ್ದೇವೆ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಸ್ವಾಮಿ, ನಾವು ಪದೇ ಪದೇ ಇಲ್ಲಿ ಇದೊಂದೇ ಇಲಾಖೆಯಲ್ಲಾ ಎಲ್ಲಾ ಇಲಾಖೆಗಳಲ್ಲೂ ಸಹ ಈ ೧ೆ ಪರ್‌ಸೆಂಟೇಜ್ ಹುದ್ದೆಗಳನ್ನು ಕಾಯ್ದಿರಿಸಿರುವ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಸರ್ಕಾರದ ಆಜ್ಞೆ ಇರುವಾಗ್ಯೂ ಕೂಡ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರಾಗಲೀ ಇಲ್ಲ ಸಬಾರ್ಡಿನೇಟ್ ಡಿಪಾರ್ಟ್‌ಮೆಂಟ್‌ನವರಾಗಲೀ ಭರ್ತಿ ಮಾಡದೇ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳವರು ಇಲ್ಲಿಯೇ ಕುಳಿತುಕೊಂಡಿರುವುದರಿಂದ ಅವರಲ್ಲಿ ನಾನು ಒಂದು ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ ಸ್ವಾಮಿ, ಯಾರು ಸರ್ಕಾರಿ ಆಜ್ಞೆಯನ್ನು ಸರಿಯಾಗಿ ಪಾಲನೆ ಮಾಡುವುದಿಲ್ಲವೋ ಅವರಿಗೆ ಏನಾದರೂ ಶಿಕ್ಷೆ ಕೊಡುತ್ತೀರೋ ಹೇಗೆ ? ಸರ್ಕಾರದ ಯೋಜನೆ ಏನಿದೆ ಅದನ್ನು ಜಾರಿಗೆ ತರುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಈ ಸಂದರ್ಭದಲ್ಲಿ ಹೇಳುವುದಾದರೆ ಅಧ್ಯಕ್ಷರೇ ಅವರು ಸರಿಯಾಗಿ ಸರಕಾರಿ ಆಜ್ಞೆಯಂತೆ ಪಾಲನೆ ಮಾಡಿಲ್ಲವೆನ್ನುವುದು ನನ್ನ ಗಮನಕ್ಕೆ ಈಗಾಗಲೇ ಬಂದಿದೆ ಅದಕ್ಕೆ ಅವರಿಗೆ ಸೂಕ್ತ ಆದೇಶ ಕೊಟ್ಟಿದ್ದೇನೆ. ಅವರು ಸರಿಯಾಗಿ ನಡೆದುಕೊಂಡಿಲ್ಲ ಎನ್ನುವುದು ನನ್ನ ಗಮನಕ್ಕೆ ಬಂದಕೂಡಲೇ ಅಲ್ಲಿ ಇದ್ದ ಇನ್ನು ೬ ಜನರನ್ನು ಪ್ರಮೋಟ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಇನ್ನು ಮುಂದೆ ಕೂಡ ಎಸ್. ಸಿ ಎಸ್. ಟಿ. ಯವರು ಡಿಪಾರ್ಟ್‌ಮೆಂಟಲ್ ಎಕ್ಸಾಮಿನೇಷನ್ ಏನಿದೆ ಅದನ್ನು ಪಾಸ್ ಮಾಡಿ ಮುಂದೆ ಬರಲು ಪ್ರೋತ್ಸಾಹ ಕೊಡಬೇಕೆಂದು ಈಗಾಗಲೇ ಆದೇಶ ನೀಡಲಾಗಿದೆ. ನಾವು ಇಷ್ಟು ಮಾಡಿದ್ದಾಗ್ಯೂ ಕೂಡ ಇನ್ನು ಪರ್ಸೆಂಟೇಜ್ ಏನಿದೆ ಅದನ್ನು ಫಿಲ್ ಮಾಡಿದ ಹಾಗೆ ಆಗುವುದಿಲ್ಲ. ಈಗ ಒಟ್ಟು ೮ ಜನರನ್ನು ಅಲ್ಲಿ ಪ್ರಮೋಟ್ ಮಾಡಿದ ಹಾಗೆ ಆಗಿದೆ ಇನ್ನು ಬಾಕಿ ಪರ್ಸೆಂಟೇಜ್ ಹಾಗೆಯೇ ಉಳಿಯತು ಅದನ್ನು ಸಹ ಭರ್ತಿ ಮಾಡಲು ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ ಆದೇಶ ನೀಡಿದ್ದೇನೆ.

Non-supply of bamoops to Agriculturists

589. SRI B. C. BASAPPA (Chamarajanagar).— Will the Minister for Food and Forest be pleased to state :—

(a) whether it has come to the notice of the Government that bamboos are not being made available to the Agriculturist for Agricultural purposes ;

(b) if so, the action Government intend to take to remove this difficulty being faced by the Agriculturist ?

SRI G. RAMEGOWDA (Minister for Food and Forest).—

(a) No.

(b) Does not arise.

ಶ್ರೀ ಎಂ. ಸಿ. ಬಸಪ್ಪ.— ಸ್ವಾಮಿ, ನನ್ನ (ಅ) ಪ್ರಶ್ನೆಗೆ ತಾವು ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದೀರಿ. ಇದರ ಬಗ್ಗೆ ತಮ್ಮ ವ್ಯಾಖ್ಯಾನ ಏನು ? ಇದರ ಬಗ್ಗೆ ಸರ್ಕಾರಕ್ಕೆ ಗೊತ್ತಿಲ್ಲ ಅಂತ ಅರ್ಥವೇ ? ರೈತರಿಗೆ ಬಿದಿರಿನ ಅಭಾವ ಉಂಟಾಗಿರುವುದು, ಅದುಂದ ಅವರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಜಿ. ರಾಮೇಗೌಡ.— ಎಲ್ಲೆಲ್ಲಿ, ಯಾವ ಯಾವ ಕಡೆ, ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ರೈತರಿಗೆ ಈ ರೀತಿ ತೊಂದರೆಯಾಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಸಿ. ಬಸಪ್ಪ.— ಸ್ವಾಮಿ, ನಾನು ಈ ಅಸೆಂಬ್ಲಿಯ ಸದಸ್ಯನಾಗಿ ಪ್ರಶ್ನೆ ಮಾಡಿದ ಮೇಲೆ ತಾವು ತಮ್ಮ ಇಲಾಖೆಗೆ ಬರೆದು ಎಲ್ಲೆಲ್ಲಿ ಯಾವ್ಯಾವ ರೈತರಿಗೆ ತೊಂದರೆಯಾಗಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಆಗುತ್ತದೆಯೇ ?

ಶ್ರೀ ಜಿ. ರಾಮೇಗೌಡ.— ನೀವು ಈ ಬಗ್ಗೆ ಪ್ರಶ್ನೆಯನ್ನು ಕಳಿಸಿದ ಮೇಲೆ ನಾವು ಈ ವಿಷಯಕ್ಕೆ ಗಮನಕೊಟ್ಟಿದ್ದೇವೆ. ನಿಮ್ಮ ಕ್ಷೇತ್ರದಲ್ಲಿ ಬೊಂಬುಗಳು ಈಗಾಗಲೇ ಮಾರಾಟವಾಗುತ್ತಾ ಇರಬಹುದು. ಅದಕ್ಕೂ ನಾವು ಏರ್ಪಾಟು ಮಾಡಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.— ಸ್ವಾಮಿ, ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಸರ್ಕಾರಿ ಡಿಪೋಗಳಲ್ಲಿ ಹಿಂದೆ ಈ ಬೆ ಂಬುಗಳನ್ನು ಮಾರಾಟಕ್ಕೆ ಇಡುತ್ತಿದ್ದರು, ಈಗ ಇದನ್ನು ಪಜಾ ಮಾಡಿದ್ದಾರೆ. ಈ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ರಾಮೇಗೌಡ.— ಸ್ವಾಮಿ, ನನಗೆ ತಿಳಿದಮಟ್ಟಿಗೆ ಅದನ್ನು ಪಜಾ ಮಾಡಿಲ್ಲ. ಹಾಗೆ ಮಾಡುವ ವಿಚಾರದ ಬಗ್ಗೆ ನಾನೂ ವಿಚಾರಿಸಿಲ್ಲ. ಈಗ ನಮ್ಮಲ್ಲಿ ಒಟ್ಟು ೩೩ ಡಿಪೋಗಳು ಇವೆ. ಅವು